# World Theatre Day

International Theatre Institute ITI - World Organization for the Performing Arts

ವಿಶ್ವ ರಂಗ ಸಂದೇಶ - ೨೦೨೨

- ಪೀಟರ್ ಸೆಲ್ಲರ್ಸ್

ಗೆಳೆಯರೇ,

ಸುದ್ದಿ ವಾಹಿನಿಗಳು ನಿತ್ಯವೂ ಗುಟುಕಿಸುತ್ತಿರುವ ವಾರ್ತೆಯನ್ನೇ ನಂಬಿ, ಇಡೀ ವಿಶ್ವವೇ, ಜೀವ ಕೈಯಲ್ಲಿ ಹಿಡಿದು, ಗಂಟೆಗಳನ್ನೂ ನಿಮಿಷಗಳನ್ನೂ ಎಣಿಸುತ್ತಿರುವ ಸಂದರ್ಭದಲ್ಲಿ, ಮಹತ್ವದ ಕಾಲ, ಮಹತ್ವದ ಪರಿವರ್ತನೆ, ಮಹತ್ವದ ಅರಿವು, ಮಹತ್ವದ ಆಲೋಚನೆ ಹಾಗೂ ಮಹತ್ವದ ದರ್ಶನಗಳ ಬಗೆಗೆ ನಮ್ಮ ನಿಜ ಪರಿಧಿ, ಸಾಧ್ಯತೆ ಹಾಗೂ ದೃಷ್ಟಿಕೋನವನ್ನು ಹೊಂದಲು, ಇದೋ, ನನ್ನಿಂದ, ಸೃಷ್ಟಿಕರ್ತರಾದ ನಮ್ಮೆಲ್ಲರಿಗೂ, ಆಮಂತ್ರಣ. ಇಂದು ನಾವು ಮಾನವ ಚರಿತ್ರೆಯ ಮಹತ್ವದ ಘಟ್ಟದಲ್ಲಿ ಬದುಕುತ್ತಿದ್ದೇವೆ. ನಮ್ಮೊಂದಿಗೆ, ಇತರರೊಂದಿಗೆ, ಅಮಾನುಷ ಲೋಕಗಳೊಂದಿಗಿರುವ ನಮ್ಮ ಸಂಬಂಧಗಳಲ್ಲಿ, ತತ್ಪರಿಣಾಮವಾದ, ತೀವ್ರ ಬದಲಾವಣೆಗಳನ್ನು ಅನುಭವಿಸುತ್ತಿದ್ದೇವೆ. ಇವುಗಳನ್ನು ಗ್ರಹಿಸುವುದು, ಇವುಗಳ ಬಗೆಗೆ ಮಾತನಾಡುವುದು, ನಿರ್ದಿಷ್ಟವಾಗಿ ವ್ಯಕ್ತಪಡಿಸುವುದು, ನಮ್ಮ ಶಕ್ತಿಗೆ ಮೀರಿದ್ದು.

ನಾವು ಬದುಕುತ್ತಿರುವುದು ೨೪ ಗಂಟೆಗಳ ಸುದ್ದಿ- ಸಮಾಚಾರಗಳ ಚಕ್ರದಲ್ಲಲ್ಲ, ನಾವು ಬದುಕುತ್ತಿರುವುದು ಕಾಲದ ತುತ್ತತುದಿಯಲ್ಲಿ. ದಿನಪತ್ರಿಕೆಗಳಿಗಾಗಲಿ ಸುದ್ದಿವಾಹಿನಿಗಳಿಗಾಗಲಿ, ನಮ್ಮ ಈ ಅನುಭವವನ್ನು ಗ್ರಹಿಸಲು ಕಿಂಚಿತ್ತೂ ಸಾಮರ್ಥ್ಯವಿಲ್ಲ.

ನಾವು ಅನುಭವಿಸುತ್ತಿರುವ ಈ ಗಂಭೀರ ಪರಿವರ್ತನೆ, ಆಳವಾದ ಬಿರುಕುಗಳನ್ನು ಅರ್ಥೈಸಿಕೊಳ್ಳಲು ಅನುವುಮಾಡಿಕೊಡುವಂಥ ಭಾಷೆಗಳು, ನಡೆಗಳು, ಚಿತ್ರಗಳಾದರೂ ಇವೆಯೇ? ನಮ್ಮ ಬದುಕಿನ ಆಂತರ್ಯವನ್ನು, ಈ ಕ್ಷಣ, ಸುದ್ದಿಯಾಗಿ ಅಲ್ಲದೆ, ಅನುಭವವಾಗಿ ಹೇಳುವುದಾದರೂ ಹೇಗೆ?

ರಂಗಭೂಮಿ ಅನುಭವದ ಕಲಾಮಾಧ್ಯಮ.

ನಿರಂತರವಾಗಿ ಹರಿದುಬರುವ ಸುದ್ದಿಗಳು, ಕೃತಕ ಅನುಭವಗಳು, ಭಯಾನಕ ಭವಿಷ್ಯವಾಣಿಗಳು - ಈ ಎಲ್ಲದರಿಂದ ಲೋಕ ತತ್ತರಿಸಿಹೋಗಿದೆ. ಇದರೊಳಗಿರುವುದು ಅಂಕಿ ಅಂಶಗಳ ಕೊನೆಯಿಲ್ಲದ ಪುನರಾವರ್ತನೆ. ಇದನ್ನೆಲ್ಲಾ ಮೀರಿ, ಬದುಕೊಂದರ, ಸುವ್ಯವಸ್ಥೆಯೊಂದರ, ಗೆಳೆತನದ, ಅಪರಿಚಿತ ಆಕಾಶದ ಪ್ರಭಾವೈಶಿಷ್ಟ್ಯದ ಅನಂತತೆಯ, ಪಾವಿತ್ರ್ಯದ ಅನುಭವವನ್ನು ಪಡೆಯುವುದಾರೂ ಹೇಗೆ? ಎರಡು ವರ್ಷದಲ್ಲಿ ಕೋವಿಡ್-೧೯ ಜನರ ಸಂವೇದನೆಯನ್ನು ಮಂದಗೊಳಿಸಿ, ಜೀವನವನ್ನು ಸಂಕುಚಿತಗೊಳಿಸಿ, ಬಾಂಧವ್ಯಗಳನ್ನು ಮುರಿದು, ನಮ್ಮನ್ನು ಒಂದು ವಿಚಿತ್ರ ರೀತಿಯಲ್ಲಿ, ಮಾನವೀಯ ನೆಲೆಯ ಆದಿಮ ಸ್ಥಿತಿಗೆ ತಂದಿರಿಸಿದೆ.

ಇಂಥ ಸಮಯದಲ್ಲಿ ಯಾವ ಬೀಜಗಳನ್ನು ಮತ್ತೆ ಮತ್ತೆ ಬಿತ್ತಬೇಕು? ಹೆಮ್ಮರವಾಗಿ ವ್ಯಾಪಿಸಿರುವ ಅದ್ಯಾವ ಕಳೆಯನ್ನು ಬುಡಸಮೇತ ಕಿತ್ತೊಗೆಯಬೇಕು? ಅನೇಕರು ಕತ್ತಿಯ ಅಲಗಿನ ಮೇಲೆ ನಿಂತಿದ್ದಾರೆ. ಅನಿರೀಕ್ಷಿತವಾಗಿ, ಅಸಂಬದ್ಧವಾಗಿ, ಕ್ರೌರ್ಯ ಧಗಧಗಿಸುತ್ತಿದೆ. ಪ್ರತಿಷ್ಠಿತ ವ್ಯವಸ್ಥೆಗಳ ಹಿಂಸ್ರ ಸ್ವರೂಪದ ಅನಾವರಣವಾಗಿದೆ.

ನಮ್ಮ ಸ್ಮಾರಕ ಶ್ರದ್ಧಾಚರಣೆಗಳೆಲ್ಲಿ ಹೋದವು? ನಾವು ಯಾವುದನ್ನು ಸ್ಮರಿಸಬೇಕು? ಯಾವ ವಿಧಿವಿಧಾನಗಳು ನಮ್ಮ ಕಲ್ಪನಾಶಕ್ತಿಯನ್ನು ಪ್ರಚೋದಿಸಿ, ನಾವು ಹಿಂದೆಂದೂ ಇಟ್ಟಿರದ ಹೆಜ್ಜೆಗಳ ತಾಲೀಮು ನಡೆಸಲು ಅನುವು ಮಾಡಿಕೊಡಬಲ್ಲವು?

ಮಹತ್ತರ ದೃಷ್ಟಿ, ಗುರಿ, ಪುನಶ್ಚೇತನ, ಪರಿಹಾರ, ಸಂರಕ್ಷಣೆಯ ರಂಗಭೂಮಿಗೆ ಹೊಸ ವಿಧಿವಿಧಾನಗಳ ಅಗತ್ಯವಿದೆ. ನಮಗೆ ಮನರಂಜನೆ ಬೇಕಿಲ್ಲ. ನಾವು ಸಂಗ್ರಹಿಸಬೇಕು. ಪರಸ್ಪರ ಅವಕಾಶಗಳನ್ನು ಹಂಚಿಕೊಳ್ಳಬೇಕು. ಹಂಚಿಕೊಂಡ ಅವಕಾಶವನ್ನು ಪೋಷಿಸಬೇಕು. ನಮಗೆ ಬೇಕಿರುವುದು ಗಹನ ಆಲಿಕೆಯ, ಸಮಾನತೆಯ, ಸುರಕ್ಷಿತ ಅವಕಾಶಗಳು.

ಮಾನವರ, ದೇವತೆಗಳ, ಗಿಡಮರಗಳ, ಪ್ರಾಣಿಗಳ, ಮಳೆಹನಿಗಳ, ಕಣ್ಣೀರಿನ, ಪುನ್ರರುಜ್ಜೀವನದ ನಡುವೆ ಸಮಾನತೆಯ ಅವಕಾಶದ ಸೃಷ್ಟಿಯೇ ರಂಗಭೂಮಿ. ಗಹನ ಆಲಿಕೆಯ, ಸಮಾನತೆಯ ಈ ಅವಕಾಶ, ಅಗೋಚರ ಸೌಂದರ್ಯದಿಂದ ಕಾಂತಿಮಯವಾಗಿದೆ; ಅಪಾಯ, ಸ್ಥಿತಪ್ರಜ್ಞೆ, ವಿವೇಕ, ಕ್ರಿಯೆ ಹಾಗೂ ತಾಳ್ಮೆಗಳ ಗಹನ ಸಂವಹನದಿಂದ ಜೀವಂತವಾಗಿದೆ.

ಅವತಂಸಕ ಸೂತ್ರದಲ್ಲಿ, ಬುದ್ಧ, ಮಾನವ ಜೀವನದ ಹತ್ತು ಬಗೆಯ ಮಹಾ ತಾಳ್ಮೆಗಳನ್ನು ಉಲ್ಲೇಖಿಸಿದ್ದಾನೆ. ಅವುಗಳಲ್ಲಿ ಅತ್ಯಂತ ಪ್ರಬಲವಾದದ್ದು ಎಲ್ಲವನ್ನೂ ಭ್ರಮೆಯೆಂದು ಬಗೆಯುವ ತಾಳ್ಮೆ. ರಂಗಭೂಮಿ, ಸದಾಕಾಲ,  ಈ ಜಗತ್ತಿನ ಬದುಕನ್ನು ಒಂದು ಮರೀಚಿಕೆ ಎಂಬಂತೆ ತೋರಿಸಿದೆ; ವಿಮೋಚಕ ಸ್ಫುಟತೆ ಹಾಗೂ ಪ್ರಾಬಲ್ಯದಿಂದ, ಮಾನವನ ಭ್ರಾಂತಿ, ಮೌಢ್ಯ, ಕುರುಡುತನ, ನಿರಾಕರಣೆಗಳಿಂದಾಚೆಗೆ ನೋಡುವ ಶಕ್ತಿಯನ್ನು ತುಂಬಿದೆ.

ನಾವು ನೋಡುತ್ತಿರುವುದರ ಬಗೆಗೆ, ನಾವು ಅದನ್ನು ನೋಡುತ್ತಿರುವ ರೀತಿಯ ಬಗೆಗೆ ನಮ್ಮ ಶ್ರದ್ಧೆ ಎಷ್ಟಿದೆ ಎಂದರೆ, ಪರ್ಯಾಯ ವಾಸ್ತವಗಳನ್ನು, ಹೊಸ ಸಾಧ್ಯತೆಗಳನ್ನು. ವಿಭಿನ್ನ ಮಾರ್ಗಗಳನ್ನು, ಅಗೋಚರ ಸಂಬಂಧಗಳನ್ನು, ಕಾಲಾತೀತ ಸಂಪರ್ಕಗಳನ್ನು, ನೋಡಲು, ಅನುಭವಿಸಲು ನಮಗೆ ಸಾಧ್ಯವಾಗುತ್ತಲೇ ಇಲ್ಲ.

ನಮ್ಮ ಮನಸ್ಸುಗಳು, ಇಂದ್ರಿಯಗಳು, ಕಲ್ಪನೆಗಳು, ಚರಿತ್ರೆಗಳು, ಭವಿಷ್ಯಗಳ ಅಂತಃಸತ್ವಕ್ಕೆ ಹೊಸ ಚೈತನ್ಯ ತುಂಬಬೇಕಿದೆ. ಈ ಕೆಲಸವನ್ನು ಯಾರೂ ಒಬ್ಬಂಟಿಯಾಗಿ ಮಾಡಲು ಸಾಧ್ಯವಿಲ್ಲ. ಇದು ನಾವೆಲ್ಲರೂ ಸೇರಿ ಮಾಡಬೇಕಾಗಿರುವ ಕೆಲಸ.

ರಂಗಭೂಮಿ, ಎಲ್ಲರೂ ಒಟ್ಟಿಗೆ ಸೇರಿ ಈ ಕೆಲಸವನ್ನು ಮಾಡಲು ಆಹ್ವಾನ.

ನಿಮ್ಮ ಕೊಡುಗೆಗೆ ಹೃತ್ಪೂರ್ವಕ ಧನ್ಯವಾದಗಳು

ಪೀಟರ್ ಸೆಲ್ಲರ್ಸ್

**Original Message in English:**
**Peter Sellars, U.S.A**
**Theatre, Opera, Festival Director**

**Translation into Kannada :**
**Rashmi Vinay**
**In memory of my late father**
**Sreekanta Gundappa,**
**Theatre activist, Mysuru,**
**Karnataka**
**rushme.vin@gmail.com**